**CFC.R.P.67** ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಕೊಪ್ಪಳ

Form No.4(Civil)
(R.P.No.57)

ಎಸ್ .ಸಿ. ನಂಃ **73/2019**

ಪಿ.ಡಬ್ಲ್ಯೂ ನಂಃ **07**
ಸಿ.ಡಬ್ಲ್ಯೂ ನಂಃ **12**
ಸಾಕ್ಷಿಯನ್ನು ದಿನಾಂಕಃ **24-09-2025**
ರಂದು ಪ್ರತಿಜ್ಞೆ ಮಾಡಿಸಲಾಯಿತು

ಸಾಕ್ಷಿದಾರನ ಹೆಸರು ಃ ಹಾಲೇಶ ಎಂ

ತಂದೆಯ ಹೆಸರು ಃ ಆಂಜನೇಯಪ್ಪ ಎಂ

ವಯಸ್ಸು ಃ **44** ವರ್ಷ

ಉದ್ಯೋಗ ಃ ಪೊಲೀಸ ಇನ್ಸಪೆಕ್ಟರ, ಆಂತರಿಕ ಭದ್ರತಾ ವಿಭಾಗ, ಬೆಂಗಳೂರು.

ವಾಸ ಸ್ಥಳ ಃ ಬೆಂಗಳೂರು

ಸಾಕ್ಷಿಯ ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರವರಿಂದ

ದಿಃ **12-3-2018** ರಿಂದ **28-6-2018** ರ ವರೆಗೆ ಯಲಬುರ್ಗಾ ಪೊಲೀಸ ಠಾಣೆಯಲ್ಲಿ ಪಿಎಸ್ಐ ಆಗಿ ಕೆಲಸ ಮಾಡಿದ್ದೇನೆ.

**2).** ದಿಃ **28-3-2018** ರಂದು ಚಾಸಾ **11** ರವರಿಂದ ಪ್ರಕರಣದ ಕಡತವನ್ನು ಪಡೆದುಕೊಂಡು ಪರಿಶೀಲಿಸಿದೆ. ಕಲಂ **86** ಅರಣ್ಯ ಕಾಯ್ದೆ ಅಳವಡಿಸಿಕೊಂಡು ತನಿಖೆ ಮುಂದುವರಿಸಿದ್ದು ನ್ಯಾಯಾಲಯಕ್ಕೆ ಮನವಿಯನ್ನು ಸಲ್ಲಿಸಿದೆ.

**3).** ದಿಃ **30-3-2018** ರಂದು ಗಸ್ತು ಕರ್ತವ್ಯದಲ್ಲಿದ್ದಾಗ ದ್ವಿಚಕ್ರ ವಾಹನದಲ್ಲಿದ್ದಂತಹ **1** ರಿಂದ **3** ನೇ ಆರೋಪಿತರನ್ನು ವಶಕ್ಕೆ ಪಡೆದು ಠಾಣೆಯಲ್ಲಿ ಕೂಲಂಕುಷವಾಗಿ ವಿಚಾರಣೆ ಒಳಪಡಿಸಿದಾಗ ಸದರಿಯವರು ಕೃತ್ಯ ಎಸಗಿದ್ದನ್ನು ಖಚಿತಪಡಿಸಿಕೊಂಡು ಅವರ ಸ್ವಃಖುಷಿ ಹೇಳಿಕೆಗಳನ್ನು ಪಡೆದುಕೊಳ್ಳಲಾಯಿತು. ಅದೇ ದಿನ ಠಾಣೆಯ ಆವರಣದಲ್ಲಿ ಪಂಚರ ಸಮಕ್ಷಮ ಆರೋಪಿಗಳು ಹಾಜರುಪಡಿಸಿದ ಮೋಟರಸೈಕಲ್ಲ ಕೆಎ **30,** ಕ್ಯೂ **7564,** ಕೊಡ್ಲಿ ಕಾವು, **30** ಇಂಚು ಉದ್ದದ **2** ಕೆ ಜಿ **90** ಗ್ರಾಂ ತೂಕದ ಗಂಧದ ಮರದ ತುಂಡು, **15** ಇಂಚು ಉದ್ದದ **3** ಕೆ **170** ಗ್ರಾಂ

ತೂಕದ ಮತ್ತೊಂದು ಗಂಧದ ಮರದ ತುಂಡು ಇವುಗಳನ್ನು ಮಧ್ಯಾಹ್ನ 12 ರಿಂದ 1 ಗಂಟೆಯ ಮಧ್ಯದಲ್ಲಿ ಜಪ್ತುಪಡಿಸಿಕೊಳ್ಳಲಾಯಿತು. ಸದರಿ ಮುದ್ದೆಮಾಲುಗಳ ಮೇಲೆ ನನ್ನ ಮತ್ತು ಪಂಚರ ಸಹಿವುಳ್ಳ ಚೀಟಿಗಳನ್ನು ಅಂಟಿಸಿ ಭಾವಚಿತ್ರ ತೆಗೆಯಲಾಯಿತು. ಸದರಿ ಜಪ್ತು ಪಂಚನಾಮೆ ಈಗ ನೋಡಿದ ನಿಪಿ 4 ರಂತೆ ಇದ್ದು, ಸಾಕ್ಷಿದಾರರ ಸಹಿಯನ್ನು ನಿಪಿ 4(ಬಿ) ಎಂದು ಗುರುತಿಸಲಾಯಿತು. ನಿಪಿ 5 ಫೋಟೋ ಆಗಿರುತ್ತದೆ. ಜಪ್ತು ಪಡಿಸಿಕೊಂಡ ವಸ್ತುಗಳು ಮುದ್ದೆಮಾಲು-1 ರಿಂದ 3 ಆಗಿರುತ್ತವೆ. ಅದೇ ದಿನ 3 ಜನ ಆರೋಪಿತರು ತೋರಿಸಿದ ಗುನ್ಹೆ ಜಾಗದಲ್ಲಿ ಪಂಚರ ಸಮಕ್ಷಮ ಪಂಚನಾಮೆಯನ್ನು ಮಧ್ಯಾಹ್ನ 2 ರಿಂದ 2-45 ರವರೆಗೆ ತಯಾರಿಸಲಾಯಿತು. ಸದರಿ ಪಂಚನಾಮೆ ಈಗ ನೋಡಿದ ನಿಪಿ 6 ರಂತೆ ಇದ್ದು, ಸಾಕ್ಷಿದಾರರ ಸಹಿಯನ್ನು ನಿಪಿ 6(ಬಿ) ಎಂದು ಗುರುತಿಸಲಾಯಿತು. ಆ ಸಮಯ ತೆಗೆದ ಫೋಟೋ ನಿಪಿ 7 ರಂತೆ ಇರುತ್ತದೆ.

4). ಅದೇ ದಿನ 4 ರಿಂದ 5 ಗಂಟೆಯವರೆಗೂ 4ನೇ ಆರೋಪಿ ಹಾಜರುಪಡಿಸಿದ 2 ಗಂಧದ ತುಂಡುಗಳನ್ನು ಪಂಚರ ಸಮಕ್ಷಮ 4 ರಿಂದ 5 ಗಂಟೆಯವರೆಗೆ ಜಪ್ತುಪಡಿಸಿಕೊಂಡು ಬಟ್ಟೆ ಕವರಿನಲ್ಲಿರಿಸಿ ಮೊಹರು ಮಾಡಲಾಯಿತು. ಅದಕ್ಕೆ ನನ್ನ ಮತ್ತು ಪಂಚರ ಸಹಿವುಳ್ಳ ಚೀಟಿಗಳನ್ನು ಅಂಟಿಸಲಾಯಿತು. ಸದರಿ ಪಂಚನಾಮೆ ಈಗ ನೋಡಿದ ದಾಖಲೆಯಾಗಿದ್ದು ಅದನ್ನು ನಿಪಿ 14 ಎಂದು, ಸಾಕ್ಷಿದಾರರ ಸಹಿಯನ್ನು ನಿಪಿ 14(ಎ) ಎಂದು ಗುರುತಿಸಲಾಯಿತು. ಆ ಸಮಯ ತೆಗೆದ ಫೋಟೋ ನಿಪಿ 15 ಎಂದು ಗುರುತಿಸಲಾಯಿತು. ಸ್ವತ್ತು ಪಟ್ಟಿ ನಂಬರಃ 37/2018 ರಲ್ಲಿರುವ ಐಟಂ ನಂಬರ 1 ಮತ್ತು 2 ಗಂಧದ ಕಟ್ಟಿಗೆಗಳನ್ನು ಸಾಕ್ಷಿದಾರರು ನೋಡಿ ಗುರುತಿಸಿದ್ದು ಅವುಗಳನ್ನು ಮುದ್ದೆಮಾಲು-4 ಮತ್ತು 5 ಎಂದು ಗುರುತಿಸಲಾಯಿತು.

5). ಠಾಣೆಗೆ ವಾಪಸ್ಸಾಗಿ ಚಾಸಾ 1 ರವರ ಪುರವಣಿ ಹೇಳಿಕೆ ಪಡೆದು ಮುದ್ದೆಮಾಲಗಳನ್ನು ಅವರ ಕಡೆಯಿಂದ ಗುರುತಿಸಿದೆ. ಸದರಿಯವರು ನನ್ನ ಮುಂದೆ ನಿಪಿ 2 ರೀತ್ಯ ಹೇಳಿಕೆ ಕೊಟ್ಟಿದ್ದರು. ಅದೇ ದಿನ ಚಾಸಾ 6 ರಿಂದ 9 ರವರನ್ನು ವಿಚಾರಿಸಿ ಮುಂದುವರಿದ ಹೇಳಿಕೆಗಳನ್ನು ಪಡೆದೆ. ಚಾಸಾ 7 ರಿಂದ 9 ನಿಪಿ 9, 11 ಮತ್ತು 13 ರಂತೆ ಮರು ಹೇಳಿಕೆಗಳನ್ನು ಕೊಟ್ಟಿದ್ದರು. ನಂತರ 4 ಜನ ಆರೋಪಿತರನ್ನು ದಸ್ತಗಿರಿ ನಿಯಮಗಳನ್ನು ಪಾಲಿಸಿ ವೈದ್ಯಕೀಯ ಪರೀಕ್ಷೆಗೊಳಪಡಿಸಲು ರಿಮ್ಯಾಂಡ ಅರ್ಜಿಯೊಂದಿಗೆ ಹಾಜರುಪಡಿಸಲು ಕ್ರಮ ತೆಗೆದುಕೊಂಡೆ. 1, 2 ಮತ್ತು 4ನೇ

ಆರೋಪಿತರು ಈಗ ನ್ಯಾಯಾಲಯದಲ್ಲಿದ್ದಾರೆ. 3 ನೇ ಆರೋಪಿಯನ್ನು ನೋಡಿದರೆ ಗುರುತಿಸಬಲ್ಲೆ.

**6).** ದಿಃ **29-5-2018** ರಂದು ನ್ಯಾಯಾಲಯದ ಅನುಮತಿ ಪಡೆದು ಆರ್ ಎಫ್ ಓ ಮುನಿರಾಬಾದರವರಿಗೆ ಸದರಿ ಗಂಧದ ತುಂಡುಗಳನ್ನು ಪರೀಕ್ಷಿಸಿ ವರದಿ ನೀಡುವಂತೆ ಗಂಧದ ತುಂಡುಗಳನ್ನು ಕಳುಹಿಸಿಕೊಟ್ಟಿದ್ದೆ.

**7).** ದಿಃ **11-6-2018** ರಂದು ಆರ್ ಎಫ್ ಓ ಮುನಿರಾಬಾದರವರಿಂದ ವರದಿ ಮತ್ತು ಮುದ್ದೆಮಾಲುಗಳನ್ನು ಪಡೆದು ಕಡತಕ್ಕೆ ಅಳವಡಿಸಿಕೊಂಡೆ. ಸದರಿ ಆರ್ ಎಫ್ ಓ ಮುನಿರಾಬಾದರವರ ವರದಿ ಈಗ ನೋಡಿದ ದಾಖಲೆಯಾಗಿದ್ದು ಅದನ್ನು ನಿಪಿ **16** ಎಂದು, ಸಾಕ್ಷಿದಾರರ ಸಹಿಯನ್ನು ನಿಪಿ **16**(ಎ) ಎಂದು ಗುರುತಿಸಲಾಯಿತು. ವಶಪಡಿಸಿಕೊಂಡ ಸ್ವತ್ತುಗಳಿಗೆ ಸಂಬಂಧಪಟ್ಟ ಸ್ವತ್ತುಗಳನ್ನು ತಯಾರಿಸಿ ನ್ಯಾಯಾಯಕ್ಕೆ ಸಲ್ಲಿಸಿದೆ. ಅಮಾನತ್ತುಪಡಿಸಿಕೊಂಡಿದ್ದ ಪ್ಲಾಸ್ಟಿಕ್ ಗೋಣಿಚೀಲ ಮತ್ತು ಬೈಕ್ ನೋಡಿದರೆ ಗುರುತಿಸಬಲ್ಲೆ. ಬೈಕಗೆ ಸಂಬಂಧಪಟ್ಟ **4** ಫೋಟೋಗಳನ್ನು ನೋಡುತ್ತಿದ್ದು ಅವುಗಳನ್ನು ಒಟ್ಟಾಗಿ ನಿಪಿ **17** ಎಂದು ಗುರುತಿಸಲಾಯಿತು. ಸ್ವತ್ತು ಪಟ್ಟಿ ನಂಬರಃ **36/2018** ರಲ್ಲಿರುವ ಐಟಂ ನಂಬರ **5** ಪ್ಲಾಸ್ಟಿಕ ಚೀಲವನ್ನು ಸಾಕ್ಷಿದಾರರು ನೋಡಿ ಗುರುತಿಸಿದ್ದು ಅದನ್ನು ಮುದ್ದೆಮಾಲು-**6** ಎಂದು ಗುರುತಿಸಲಾಯಿತು.

**8).** ದಿಃ **12-6-2018** ರಂದು ದೋಷಾರೋಪಣ ಪಟ್ಟಿಯನ್ನು ತಯಾರಿಸಿ ನ್ಯಾಯಾಲಯಕ್ಕೆ ಸಲ್ಲಿಸಿದೆ.

ನ್ಯಾಯಾಲಯದ ಬೆಳಗಿನ ಅವಧಿ ಮುಕ್ತಾಯವಾಗಿದ್ದರಿಂದ ಪಾಟೀಸವಾಲನ್ನು ಮಧ್ಯಾಹ್ನದ ಅವಧಿಗೆ ಮುಂದೂಡಲಾಯಿತು.

(ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತ ಉಲ್ಲೇಖನದ ಮೇರೆಗೆ ಸಾಕ್ಷ್ಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

(ಸಿ ಚಂದ್ರಶೇಖರ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಕೊಪ್ಪಳ.

ದಿಃ **01-07-2026** ರಂದು ಪ್ರಾಸಾ **7** ರವನ್ನು ಮಧ್ಯಾಹ್ನದ ಅವಧಿಗೆ ಕರೆಸಿ ಸತ್ಯಪ್ರತಿಜ್ಞೆ

ಬೋಧಿಸಲಾಯಿತು.

ಪಾಟೀ ಸವಾಲು ಃ ಆರೋಪಿತರ ಪರ ವಕೀಲರಿಂದ

9). ಚಾಸಾ 2 ಮತ್ತು 3 ದಮ್ಮೂರು ಗ್ರಾಮದವರು. ಯಲಬುರ್ಗಾ ಠಾಣೆಯಿಂದ ಸದರಿ ಗ್ರಾಮ ಎಷ್ಟು ದೂರ ಇದೆ ಎಂದು ಈಗ ನೆನಪಿಲ್ಲ. ಪಂಚರಿಗೆ ಠಾಣೆಯಲ್ಲಿ ಹಾಜರಿರುವಂತೆ ಲಿಖಿತ ನೋಟೀಸನ್ನು ಕೊಟ್ಟಿರಲಿಲ್ಲ. 11-30 ಗಂಟೆಗೆ ಆ ಪಂಚರಿಗೆ ಠಾಣೆಗೆ ಬರುವಂತೆ ಹೇಳಿದ್ದೆ. 1 ರಿಂದ 3 ನೇ ಆರೋಪಿಗಳನ್ನು ಸುಮಾರು 11 ಗಂಟೆಗೆ ಯಲಬುರ್ಗಾದ ಕನಕದಾಸ ವೃತ್ತದ ಬಳಿ ವಶಕ್ಕೆ ಪಡೆದಿದ್ದೆವು. ಆ ಸಮಯ ಚುನಾವಣೆ ಇದ್ದ ಕಾರಣ ನಾವುಗಳು ಚೆಕ್ಕಪೋಸ್ಟ ನಿರ್ಮಿಸಿ ವಾಹನಗಳನ್ನು ತಪಾಸಣೆ ಮಾಡುತ್ತಿದ್ದೆವು. 3 ಜನ ಆರೋಪಿಗಳು ಬೈಕನಲ್ಲಿ ಬಂದರು.

10). ಸ್ವಖುಷಿ ಹೇಳಿಕೆಗಳನ್ನು ಕೊಟ್ಟಾಗ ಬೈಕ ತಮ್ಮದೇ ಎಂದು ಆರೋಪಿಗಳು ಹೇಳಿದ್ದರು. ಅವರು ಯಾವುದೇ ಸ್ವಖುಷಿ ಹೇಳಿಕೆಗಳನ್ನು ಕೊಟ್ಟಿರಲಿಲ್ಲ ಮತ್ತು ಅವರನ್ನು ನಾನು ಠಾಣೆಗೆ ಕರೆದುಕೊಂಡು ಹೋಗಿರಲಿಲ್ಲ ಎಂದರೆ ಸರಿಯಲ್ಲ. ಸಿಬ್ಬಂದಿ ಮೂಲಕ ಪಂಚರನ್ನು ಠಾಣೆಗೆ ಕರೆಸಿಕೊಂಡಿದ್ದೆ ಆದರೆ ಯಾವ ಸಿಬ್ಬಂದಿ ಎಂದು ನೆನಪಿಲ್ಲ. ಬೈಕನ್ನು ಪಂಚರ ಸಮಕ್ಷಮ ವಶಪಡಿಸಿಕೊಂಡಿರಲಿಲ್ಲ ಎಂದರೆ ಸರಿಯಲ್ಲ. ಗಂಧದ ತುಂಡುಗಳನ್ನು ತೂಕ ಮಾಡಲು ಪಿಸಿ 353 ರವರ ಮೂಲಕ ತಕ್ಕಡಿಯನ್ನು ತರಿಸಿಕೊಂಡಿದ್ದೆ. ಠಾಣೆಯ ಎದುರು ಜರಾಕ್ಸ ಅಂಗಡಿ ಮತ್ತು ಹೊಟೇಲ್ ಹೊರತುಪಡಿಸಿ ಅಲ್ಲಿ ಯಾವುದೇ ಕಿರಾಣಿ ಅಂಗಡಿಗಳು ಇರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಗಳಿಂದ ಗಂಧದ ತುಂಡುಗಳನ್ನು ಜಪ್ತ ಮಾಡಿರಲಿಲ್ಲ ಮತ್ತು ಠಾಣೆಯಲ್ಲಿ ಅವುಗಳನ್ನು ನಾನು ತೂಕ ಮಾಡಿರಲಿಲ್ಲ ಎಂದರೆ ಸರಿಯಲ್ಲ.

11). ಚಾಸಾ 6 ಮತ್ತು 7 ಪಂಚರು ಸಹಾ ದಮ್ಮೂರು ಗ್ರಾಮದವರಾಗಿರುತ್ತಾರೆ. ಅವರಿಗೆ ಲಿಖಿತ ನೋಟೀಸುಗಳನ್ನು ಕೊಟ್ಟಿರಲಿಲ್ಲ ಆದರೆ ಸುಮಾರು 1 ಗಂಟೆಗೆ ಠಾಣೆಗೆ ಕರೆಸಿಕೊಂಡಿದ್ದೆ. ಆರೋಪಿತರು ಮತ್ತು ಪಂಚರ ಸಮಕ್ಷಮ ನಾನು ಯಾವುದೇ ಜಪ್ತ ಪಂಚನಾಮೆಯನ್ನು ಮಾಡಿರಲಿಲ್ಲ ಹಾಗೂ ಗುನ್ಹಾ ಸ್ಥಳದಲ್ಲಿ ಫೋಟೋಗಳನ್ನು ತೆಗೆದಿರಲಿಲ್ಲ ಎಂದರೆ ಸರಿಯಲ್ಲ.

12). ಸವಡಿ ಗ್ರಾಮದಲ್ಲಿ ಮಾಡಿದ ಪಂಚನಾಮೆಗೆ ಚಾಸಾ 4 ಮತ್ತು 5 ಪಂಚರಾಗಿ ಸಹಕರಿಸಿದ್ದು ಅವರು ಯಲಬುರ್ಗಾದವರಾಗಿರುತ್ತಾರೆ. ಅವರಿಗೂ ಸಹಾ ಲಿಖಿತ ನೋಟೀಸು ಕೊಟ್ಟಿರಲಿಲ್ಲ ಮೌಖಿಕವಾಗಿ 3 ಗಂಟೆಗೆ ಕರೆಸಿಕೊಂಡಿದ್ದೆವು. 1 ರಿಂದ 3 ನೇ ಆರೋಪಿಗಳು, ಪಂಚರು ಮತ್ತು ನಾವು ಸಿಬ್ಬಂದಿ ಅಂದಾಜು 8-9 ಜನ ಸವಡಿ

ಗ್ರಾಮಕ್ಕೆ ಹೋಗಿದ್ದೆವು. ನಾವು ಆ ಗ್ರಾಮಕ್ಕೆ ಹೋಗಿಲ್ಲ ಹಾಗೂ 4ನೇ ಆರೋಪಿ ಮನೆಯಿಂದ ಯಾವುದೇ ವಸ್ತುಗಳನ್ನು ಅಮಾನತ್ತುಪಡಿಸಿಕೊಂಡಿರಲಿಲ್ಲ ಎಂದರೆ ಸರಿಯಲ್ಲ.

13). ಯಲಬುರ್ಗಾ ಠಾಣೆಗೆ ಸರ್ಕಾರಿ ವಾಹನ ಸೌಲಭ್ಯ ಒದಗಿಸಲಾಗಿದೆ ಎಂದರೆ ಸರಿ. 3 ಪಂಚನಾಮೆಗಳನ್ನು ಒಂದೇ ದಿನ ತಯಾರಿಸಲಾಗಿದ್ದು, ಸದರಿ ಪಂಚನಾಮೆಗಳಲ್ಲಿ ಇಲಾಖಾ ಜೀಪನ ನೋಂದಣಿ ಸಂಖ್ಯೆ ನಮೂದಿಸಿಲ್ಲ. ಚಾಸಾ 1, 6 ರಿಂದ 8 ರವರ ಯಾವುದೇ ಪುರವಣಿ ಹೇಳಿಕೆಗಳನ್ನು ಕೊಟ್ಟಿರಲಿಲ್ಲ ಎಂದರೆ ಸರಿಯಲ್ಲ. ಬೇರೆ ಪ್ರಕರಣಗಳಲ್ಲಿ ವಶಪಡಿಸಿಕೊಂಡ ಗಂಧದ ತುಂಡುಗಳು ನಮ್ಮ ಠಾಣೆಯಲ್ಲಿರುತ್ತವೆ ಎಂದರೆ ಸರಿಯಲ್ಲ. ಆರೋಪಿತರಿಂದ ಯಾವುದೇ ಮುದ್ದೆಮಾಲುಗಳನ್ನು ವಶಪಡಿಸಿಕೊಳ್ಳದೇ ಇದ್ದರೂ ಠಾಣೆಯಲ್ಲಿದ್ದ ಗಂಧದ ತುಂಡುಗಳನ್ನು ಆರ್ ಎಫ್ ಓ ಮುನಿರಾಬಾದರವರಿಗೆ ಪರೀಕ್ಷೆಗೆ ಕಳುಹಿಸಿಕೊಟ್ಟಿದ್ದೆ ಎಂದರೆ ಸರಿಯಲ್ಲ. ಆರೋಪಿಗಳಿಗೂ ಹಾಗೂ ಮುದ್ದೆಮಾಲುಗಳಿಗೂ ಯಾವುದೇ ಸಂಬಂಧ ಇರದೇ ಇದ್ದರೂ ಅವರ ವಿರುದ್ಧ ಸುಳ್ಳು ದೋಷಾರೋಪಣ ಪಟ್ಟಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಕೊಡಲಿ ಮತ್ತು ಪ್ಲಾಸ್ಟಿಕ್ ಚೀಲಗಳು ಬೇರೆ ಕಡೆ ಸಿಗುತ್ತವೆ ಆದರೆ ಇವುಗಳು ಸಿಗುವುದಿಲ್ಲ.

14). ಮೋಟರ ಸೈಕಲ್ಲ ಮಾಲೀಕರು ಯಾರಾಗಿರುತ್ತಾರೆ ಎಂದು ತೋರಿಸಲು ಅದರ ಆರ್ ಸಿ ಯನ್ನು ನ್ಯಾಯಾಲಯಕ್ಕೆ ಕೊಟ್ಟಿಲ್ಲ. ಬೈಕ್ ನೋಂದಣಿ ಸಂಃ ಕೆಎ 30 ಕ್ಯೂ 7564 ಮತ್ತು ಆರೋಪಿಗಳಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಿಪಿ 4 ಪಂಚನಾಮೆಯಲ್ಲಿ ಚಾಸಾ 2 ವಜ್ರಬಂಡಿ ಗ್ರಾಮದವರು ಮತ್ತು ಚಾಸಾ 3 ಸಂಗನಾಳದವರು ಎಂದು ನಮೂದಿಸಿದೆ ಎಂದರೆ ನಜರಚೂಕಿನಿಂದ ಆಗಿರಬಹುದು. ನಿಪಿ 6 ಪಂಚನಾಮೆಯಲ್ಲಿ ಸಹಿ ಮಾಡಿರುವ 2ನೇ ಸಾಕ್ಷಿದಾರರು ಯಮನಪ್ಪ ತಂದೆ ದುರುಗಪ್ಪ ಹರಿಜನ ಎಂಬುವರನ್ನು ಸಾಕ್ಷಿದಾರರನ್ನಾಗಿ ದೋಷಾರೋಪಣ ಪಟ್ಟಿಯಲ್ಲಿ ತೋರಿಸಿರುವುದಿಲ್ಲ. ಪಂಚರನ್ನು ಕರೆದುಕೊಂಡು ಬಂದ ಸಿಬ್ಬಂದಿಗಳ ಹೇಳಿಕೆಗಳನ್ನು ನಾನು ಮಾಡಿಕೊಂಡಿರಲಿಲ್ಲ. ಆರೋಪಿತರು ಯಾವುದೇ ಅಪರಾಧ ಮಾಡದೇ ಇದ್ದರೂ ಅವರ ಹೆಸರುಗಳನ್ನು ತಪ್ಪಾಗಿ ಈ ಪ್ರಕರಣಕ್ಕೆ ಸೇರಿಸಿಕೊಂಡು ಸರಿಯಾದ ತನಿಖೆ ಮಾಡದೇ ದೋಷಾರೋಪಣ ಪಟ್ಟಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತ ಉಲ್ಲೇಖನದ ಮೇರೆಗೆ ಸಾಕ್ಷ್ಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

(ಸಿ ಚಂದ್ರಶೇಖರ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಕೊಪ್ಪಳ.